ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ಆದರೆ, ಲೋಕೋಪಯೋಗಿ ಇಲಾಖೆ ಎಂದು ಪ್ರಿಂಟ್ ಆಗಿ ಬಂದಿದೆ. Actually ಆ ಪ್ರಶ್ನೆ RDPR ಗೆ ಹೋಗಬೇಕಾಗಿತ್ತು. ಈಗ ಸದನದಲ್ಲಿ RDPR Minister ರವರು ಇಲ್ಲ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ಸದನದಲ್ಲಿ ಸಭಾನಾಯಕರಾದ Law Minister ಇದ್ದಾರೆ. ನಮ್ಮ ಪ್ರಶ್ನೆಗೆ RDPR Minister ರವರು ಕೊಡಬೇಕಾದ ಉತ್ತರವನ್ನು ತಾವು ಕಳುಹಿಸಿಕೊಡಬೇಕಾದರೆ ಮುದ್ರಣ ವಾಗುವಾಗ ಲೋಕೋಪಯೋಗಿ ಎಂದು ಬಂದಿದೆ. ಈಗಾಗಲೇ ಉತ್ತರ ಕೊಟ್ಟಿದ್ದೀರಿ. ಇದು ನನಗೆ ಸಮಾಧಾನಕರವಾದ ಉತ್ತರವಲ್ಲ. ಸಂಬಂಧಪಟ್ಟ ಮಂತ್ರಿಯವರು ಸದನದಲ್ಲಿಲ್ಲ. ದಯವಿಟ್ಟು, ಇದರ ಬಗ್ಗೆ ಅವರ ಕಡೆಯಿಂದ ಉತ್ತರ ಕೊಡಿಸುವಂಥದ್ದಾಗಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಚ್ಯುತಿಯಾಗಿದೆ. Detail ಉತ್ತರವನ್ನು ನಾನು ಕೊಡಿಸುತ್ತೇನೆ.

ಪ್ರಶ್ನೆ ಸಂಖ್ಯೆ: 126 (852)

ಮಾನ್ಯ ಸದಸ್ಯರು ಹಾಜರಿರಲಿಲ್ಲ

ಭತ್ತಕ್ಕೆ ಬೆಂಬಲ ಬೆಲೆ

127 (855) (ಕೃಷಿ ಇಲಾಖೆಯಿಂದ ವರ್ಗಾಯಿಸಲ್ಪಟ್ಟ ಪ್ರಶ್ನೆ) ಶ್ರೀ ಹಾಲಪ್ಪ ಹೆಚ್. (ಸೊರಬ) : ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಭತ್ತದ ಬೆಲೆಯು ಕುಸಿದಿರುವುದರಿಂದ ರೈತರು ಸಂಕಷ್ಟಕ್ಕೆ ಈಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; (ವಿವರ ನೀಡುವುದು);

ಇ) ಭತ್ತಕ್ಕೆ ಬೆಂಬಲ ಬೆಲೆ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹೊರ ರಾಜ್ಯಗಳಿಂದ ಭತ್ತ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು);

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು) :

ಅ) ಹೌದು.

ಆ) 2011ರ ಮುಂಗಾರು ಹಂಗಾಮಿಗೆ ಕೇಂದ್ರ ಸರ್ಕಾರವು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ. ಗುಣಮಟ್ಟದ ಸಾಮಾನ್ಯ ಹಾಗೂ ಗ್ರೇಡ್ ಎ ಪ್ರಬೇಧದ ಭತ್ತಕ್ಕೆ ಅನುಕ್ರಮವಾಗಿ ಪ್ರತಿ ಕ್ವಿಂಟಾಲ್‌ಗೆ ರೂ.1,080/- ಮತ್ತು ರೂ.1,110/-ರ ಬೆಂಬಲ ಬೆಲೆ ಘೋಷಿಸಿರುತ್ತದೆ. ರಾಜ್ಯದ ಭತ್ತದ ಬೆಳೆಗಾರರ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರವು ಘೋಷಿಸಿದ ಬೆಂಬಲ ಬೆಲೆಗೆ ಹೆಚ್ಚುವರಿಯಾಗಿ ಪ್ರತಿ ಕ್ವಿಂಟಾಲ್‌ಗೆ ರೂ.200-00 ರಂತೆ ರಾಜ್ಯ ಸರ್ಕಾರವು ಪ್ರೋತ್ಸಾಹಧನವನ್ನು ನೀಡಲು ತೀರ್ಮಾನಿಸಿರುತ್ತದೆ. ಅದರಂತೆ, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಮುಖಾಂತರ ಭತ್ತವನ್ನು ಖರೀದಿಸಲಾಗುವುದು.

ಇ) ಮೇಲಿನಂತೆ ಉತ್ತರಿಸಲಾಗಿದೆ.

ಈ) ಹೌದು.

ಉ) ಅಂತರರಾಜ್ಯ ಭತ್ತದ ವ್ಯವಹಾರ ನಿರ್ಬಂಧದ ಕುರಿತಂತೆ ಕೇಂದ್ರ ಸರ್ಕಾರ ನಿರ್ಧರಿಸಬೇಕಾಗಿರುತ್ತದೆ.

ಅಧ್ಯಕ್ಷರು : ನಿನ್ನೆ ಚರ್ಚೆಯಾಗಿದೆಯಲ್ಲ.

ಶ್ರೀ ಹೆಚ್.ಹಾಲಪ್ಪ : ಇವತ್ತು ಬಂದಿದೆ.

ಅಧ್ಯಕ್ಷರು : ಚರ್ಚೆಯಾಗಿ ಬೆಂಬಲ ಬೆಲೆ ಘೋಷಣೆಯಾಗಿದೆ.

ಶ್ರೀ ಹೆಚ್. ಹಾಲಪ್ಪ : ಉತ್ತರ ಕೊಟ್ಟಿದ್ದಾರೆ. ಒಂದು ಸಣ್ಣ ತಪ್ಪು ಅಧಿಕಾರಿಗಳ ಕಣ್ತಪ್ಪಿನಿಂದ ಆಗಿದೆಯೋ ಏನೋ. ಮಾನ್ಯ ಮುಖ್ಯಮಂತ್ರಿ

ಯವರು 250 ರೂಪಾಯಿ ಬೆಂಬಲ ಬೆಲೆ ಕೊಡುತ್ತೇವೆಂದು ಹೇಳಿದರು. ನನಗೆ ಕೊಟ್ಟಿರುವ ಉತ್ತರದಲ್ಲಿ 200 ರೂ. ಕೊಡುತ್ತೇವೆಂದು ಉತ್ತರಿಸಿದ್ದಾರೆ.

ಅಧ್ಯಕ್ಷರು : ಅದು prior to declaration. ಇಲ್ಲಿ ಹೇಳಲಿಕ್ಕೆ ಮುಂಚೆ ಉತ್ತರ ರೆಡಿ ಮಾಡಿರುತ್ತಾರೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : Cabinet meeting ಆದಂಥ ಸಂದರ್ಭದಲ್ಲಿ ಒಂದು ಕ್ವಿಂಟಾಲ್‌ಗೆ 200 ರೂಪಾಯಿ ಬೆಂಬಲ ಬೆಲೆ ಕೊಡಬೇಕೆಂಬ ತೀರ್ಮಾನವಾಗಿತ್ತು. ಆ ಸಂದರ್ಭದಲ್ಲಿ ಆ ತೀರ್ಮಾನಕ್ಕನು ಗುಣವಾಗಿ ನಾವು ಉತ್ತರವನ್ನು ಕಳುಹಿಸಿಕೊಟ್ಟಿದ್ದೇವೆ. ಆದರೆ, ಸದನದಲ್ಲಿ ಅನೇಕ ಗೌರವಾನ್ವಿತ ಶಾಸಕರು 200 ರೂಪಾಯಿ ೈತರಿಗೆ ಸಾಕಾಗುವುದಿಲ್ಲ. 300/–ರೂಪಾಯಿ ಕೊಡಬೇಕೆಂದು ಒತ್ತಾಯ ಮಾಡಿದಾಗ ಸನ್ಮಾನ್ಯ ಮುಖ್ಯಮಂತ್ರಿಗಳು 200/– ಮತ್ತು 300/–ಮಧ್ಯದಲ್ಲಿ 250/–ರೂಪಾಯಿ ಕೊಡುತ್ತೇವೆಂದು ಇಲ್ಲಿ ಘೋಷಣೆಯಾಗಿರುವುದರಿಂದ ಇದು ಲೋಪ ದೋಷವಲ್ಲ, ಅಚಾನಕ್ ಆಗಿ ಆಗಿದೆ ಮುಖ್ಯಮಂತ್ರಿಯವರು ಇಲ್ಲಿಯೇ ಘೋಷಣೆ ಮಾಡಿದ್ದರಿಂದ ಅದು ಆ ರೀತಿ ಆಗಿದೆ ಎಂದು ತಮ್ಮ ಮೂಲಕ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್. ಹಾಲಪ್ಪ : Clarification ಏನಿಲ್ಲ ಸರ್.

ಅಧ್ಯಕ್ಷರು : ಸದನದಲ್ಲಿ ಘೋಷಣೆಯಾಗುವುದಕ್ಕಿಂತ ಮುಂಚೆ ಕೊಟ್ಟಂಥ ಉತ್ತರ.

ಶ್ರೀ ಹೆಚ್. ಹಾಲಪ್ಪ : ನಾನು ರೇಟ್ ಕೇಳುತ್ತಿಲ್ಲ. ಇವರು ಬೇಗ ಪ್ರಾರಂಭಿಸಲಿ ಎನ್ನುವುದಷ್ಟೇ ನನ್ನ ವಿನಂತಿ. ನಾವು ಶಿವಮೊಗ್ಗ ಜಿಲ್ಲೆಯಲ್ಲಿ ಈ ತಿಂಗಳ 2 ರಂದು ಪ್ರಾರಂಭಿಸಿ ನಿಟ್ಟಿದ್ದೇವೆ. ಆದರೆ, ಇಲ್ಲಿಯವರೆಗೆ ಖರೀದಿಯಾಗಿಲ್ಲ. ಈಗ ಖರೀದಿ ಮಾಡದಿರುವುದು ಒಳ್ಳೆಯದಾಯಿತು. ಒಳ್ಳೆಯ ರೇಟ್ ಸಿಕ್ಕಿತು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ನಾವು ಖರೀದಿ ಮಾಡಲಿಕ್ಕೆ ಸಿದ್ಧರಿದ್ದೇವೆ.

ಶ್ರೀ ಹೆಚ್. ಹಾಲಪ್ಪ : ಒಂದು ನಿಮಿಷ. ಇವರೇ ಮಾತನಾಡಿ ಬಿಡುತ್ತಾರೆ. ಮಾನ್ಯ ಮಂತ್ರಿಗಳು ಬಹಳ ಉದ್ದದ ಉತ್ತರ ಹೇಳುತ್ತೀರಿ. ಪ್ರಶ್ನೆನೇ ಇಲ್ಲ. ಏಕೋ ನಮ್ಮ ಸವದಿಯವರ ಉತ್ತರ ಉದ್ಧ ಆಗುತ್ತಿದೆ. ಉದ್ಧದ ಸಹಕಾರ, ಸಹಕಾರವೆ ಹಾಗೆ. ಸಹಕಾರ ಎಲ್ಲರಿಗೂ ಸಿಗಲಿ, ಅದು

ಒಂದು ಕಡೆ ಇರಲಿ. ಲೇಟ್ ಮಾಡಿದಷ್ಟು ಭತ್ತ ತೆಗೆದುಕೊಂಡು ಹೋಗಿ ಸಾವಿರ ರೂಪಾಯಿಗೆ 900 ರೂಪಾಯಿಗೆ ವ್ಯಾಪಾರಸ್ಥರು ಖರೀದಿಸಿ ಬಿಡುತ್ತಾರೆ. ಪುನಃ 1,330/– ರೂಪಾಯಿಗೆ 1,360/– ರೂಪಾಯಿಗೆ ನಮ್ಮದೇ ಸಹಕಾರದ ಗೋಡೌನ್‌ಗೆ ತಂದು ವ್ಯಾಪಾರಸ್ಥರು ಹಾಕುತ್ತಾರೆ. 300/– ರೂಪಾಯಿ ರೈತನಿಗೆ ಹೋಯಿತು, ಸರ್ಕಾರಕ್ಕೂ ಹೋಯಿತು, ಅವನಿಗೆ ಲಾಭವಾಯಿತು. ಸುಮ್ಮನೆ ಕೈ ಬದಲಾವಣೆ ಮಾಡಿದ್ದು ಅಷ್ಟೆ. ಹೀಗಾಗಿ ನಮ್ಮ ಮೇಡಂ ನವರು ಗಮನ ಹರಿಸಬೇಕು. Procurement ಮಾಡುವುದು ಇವರು. ಈ ಪ್ರಶ್ನೆ ಅವರಿಗೆ ಏಕೆ ಹೋಯಿತೋ ನನಗೆ ಗೊತ್ತಿಲ್ಲ.

ಅಧ್ಯಕ್ಷರು : ಮೊನ್ನೆ ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೀರಿ. ಸಾಕಷ್ಟು ಚರ್ಚೆಯಾದ ಮೇಲೂ ಮತ್ತೇನು ಪುನಃ ಚರ್ಚೆ? ಇದು ಸರಿಯಲ್ಲ, ನನಗೇನು ಸರಿ ಎಂದು ಕಾಣಿಸುತ್ತಿಲ್ಲ.

ಶ್ರೀ ಹೆಚ್. ಹಾಲಪ್ಪ : ರೈತರ ಬಗ್ಗೆ ಮತ್ತು ಅವರು ಬೆಳೆಯುವ ಭತ್ತದ ಬಗ್ಗೆ ಮಾತನಾಡುವುದು ಬಿಟ್ಟು ಬೇರೆ ಯಾವುದರ ಬಗ್ಗೆ ಮಾತನಾಡಬೇಕು, ಸ್ವಾಮಿ?

ಅಧ್ಯಕ್ಷರು : ರೈತರ ಮೇಲೆ, ಭತ್ತದ ಮೇಲೆ ಒಂದು ಗಂಟೆ ಕಾಲ ಚರ್ಚೆಯಾಗಿದೆ.

ಶ್ರೀ ಹೆಚ್. ಹಾಲಪ್ಪ : ಖರೀದಿಸುತ್ತಿಲ್ಲವೆಂದು ನಾನು ಹೇಳುತ್ತಿದ್ದೇನೆ. ಬೇಗನೆ ಖರೀದಿಸಲಿ.

ಅಧ್ಯಕ್ಷರು : ಆಯಿತು.

ಶ್ರೀ ಹೆಚ್. ಹಾಲಪ್ಪ : ಅಲ್ಲಿ ನಾನು ವಿಚಾರಿಸಿದೆ ಇವರಿಗೆ ಗೋಡೌನ್ ತೊಂದರೆಯಿದೆ. ಏಕೆಂದರೆ, ಹೋದ ವರ್ಷದ ಮೆಕ್ಕೆಜೋಳ FCI ಗೋಡೌನ್ ನಲ್ಲಿದೆ. ಅವರು ಎತ್ತುವರಿ ಮಾಡಿಲ್ಲ. ಅಲ್ಲಿ ಟೆಂಡರ್ ಆಗಬೇಕು. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಆಹಾರ ಇಲಾಖೆಗೆ ಪತ್ರ ಬರೆದು ಬೇಗ ಖಾಲಿ ಮಾಡಿಸಬೇಕು. ಇಲ್ಲದಿದ್ದರೆ ಇವರಿಗೆ ಗೋಡೌನ್ ಪ್ರಾಬ್ಲಂ ಆಗುತ್ತದೆ. ಇದು ಗೊತ್ತೆ? ಈಗ ಅವರು ಕೇಳಿಕೊಂಡು ಬಂದು ಹೇಳಬೇಕು. ನಮ್ಮ ತಾಲ್ಲೂಕಿನಲ್ಲಿ ಬಹಳ ತೊಂದರೆ ಆಗಿದೆ, ಅದಕ್ಕೆ ಪ್ರಸ್ತಾಪ ಮಾಡಿದ್ದೇವೆ. ಇನ್ನೊಂದು ಸಮಸ್ಯೆ ಇದೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಲಕ್ಷಾಂತರ ಕ್ವಿಂಟಾಲ್ ಜ್ಯೋತಿ ಭತ್ತ ಬೆಳೆದಿದ್ದಾರೆ ಅದನ್ನು ತೆಗೆದುಕೊಳ್ಳುತ್ತಿಲ್ಲ. ಇದು ಬೇರೆ ಕಡೆ ಚರ್ಚೆಯಾಯಿತು. ನಮ್ಮ ನಾಯಕರಾದ ದೊಡ್ಡ

ಸಾಹೇಬರ ಹತ್ತಿರ ಮಾತನಾಡಿದ್ದೇವೆ. ಅಲ್ಲಿ ರಾಜ್ಯ ಸರ್ಕಾರವೇ ಏನಾದರೂ ಮಾಡಿ ಖರೀದಿಸುವ ಹಾಗೆ ಮಾಡಿ ಎಂದು ಹೇಳಿದ್ದಾರೆ. ಮಾನ್ಯ ಈಶ್ವರಪ್ಪನವರು ಇಲ್ಲಿಯೇ ಇದ್ದಾರೆ ಗಮನಹರಿಸಬೇಕು. ದಯವಿಟ್ಟು ಶಿವಮೊಗ್ಗ ಜಿಲ್ಲೆಯಲ್ಲಿ ಲಕ್ಷಾಂತರ ಕ್ವಿಂಟಾಲ್ ಇದೆ, ಅದನ್ನು FCI ನವರು ತೆಗೆದುಕೊಳ್ಳುವುದಿಲ್ಲ. ಇವರು procurement ಮಾಡುವುದಿಲ್ಲ. ಇದರ ಬಗ್ಗೆ ಗಮನಹರಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಂ.ಎಸ್. ಸೋಮಲಿಂಗಪ್ಪ : ಬೆಂಬಲ ಬೆಲೆ ಘೋಷಣೆಯಾಗಿದೆ ಆದರೆ ಇನ್ನೂ ಖರೀದಿ ಕೇಂದ್ರ ತೆರೆದಿಲ್ಲ. ಇದಲ್ಲದೆ 50% ಈಗಾಗಲೇ ರೈತರು ಮಾರಾಟ ಮಾಡುತ್ತಿದ್ದಾರೆ...

ಅಧ್ಯಕ್ಷರು : ಎಲ್ಲರೂ ಉಪ ಪ್ರಶ್ನೆ ಕೇಳುವುದಕ್ಕೆ ಇದರಲ್ಲಿ ಏನು ಇದೆ? ಕೇಳುವಂಥದ್ದು ಏನೂ ಇಲ್ಲ. ಮೊನ್ನೆ ಎಲ್ಲರೂ ಚರ್ಚೆ ಮಾಡಿದ್ದಾರೆ, ಮತ್ತೆ ಮತ್ತೆ ಕೇಳುವುದರಲ್ಲಿ ಅರ್ಥವೇ ಇಲ್ಲ. ಪ್ಲೀಸ್ ಅವರು ಉತ್ತರ ಹೇಳಲಿ. ಸೋಮಲಿಂಗಪ್ಪನವರೆ, ಪ್ಲೀಸ್ ಕುಳಿತುಕೊಳ್ಳಿ. ಮೊನ್ನೆ ಸಾಕಷ್ಟು ಚರ್ಚೆಯಾಗಿ ಸರ್ಕಾರದಿಂದ ಸಮರ್ಪಕ ಉತ್ತರ ಬಂದಿದೆ, ನಿಮ್ಮ ಎಲ್ಲಾ ಬೇಡಿಕೆಗಳನ್ನು ಈಗ ಕೇಳಿದರೆ ಹೇಗೆ? ಸಚಿವರು ಉತ್ತರ ಕೊಡಿ.

ಕು: ಶೋಭಾ ಕರಂದ್ಲಾಜೆ : ಮಾನ್ಯ ಸದಸ್ಯರು ಹೇಳಿದ ಜ್ಯೋತಿ ಭತ್ತ ಕೇವಲ ಶಿವಮೊಗ್ಗ ಮತ್ತು ಮಲೆನಾಡಿನ ಪ್ರದೇಶಗಳಲ್ಲಿ ಬೆಳೆಯುತ್ತದೆ ಇದನ್ನು ಉಪಯೋಗಿಸುವವರು ಕೂಡ ಕೇರಳ ರಾಜ್ಯದಲ್ಲಿ ಮತ್ತು ದಕ್ಷಿಣ ಕನ್ನಡದ ಉಡುಪಿ ಜನರು. ಅಂದರೆ ಕೆಂಪು ರೈಸ್, ಬಾಯಿಲ್ಡ್ ರೈಸ್, ಎಂದು ನಾವು ಮಾಡುತ್ತೇವೆ. ಇದನ್ನು ಕೇಂದ್ರ ಸರ್ಕಾರ ನೋಟಿಫೈ ಮಾಡಿದ ಲಿಸ್ಟ್ ನಲ್ಲಿ ಸೇರಿಸಿಲ್ಲ. ಅದಕ್ಕಾಗಿ Food Corporation of India ದವರು ಇದನ್ನು ತೆಗೆದುಕೊಳ್ಳುವುದಿಲ್ಲ. ಯಾವುದೂ ನೋಟಿಫೈ ಆಗಿಲ್ಲ, ಅದನ್ನು ಅವರು ತೆಗೆದುಕೊಳ್ಳುವುದಿಲ್ಲ. ಈಗಾಗಲೇ ಕೇಂದ್ರ ಸರ್ಕಾರಕ್ಕೆ ನಾವು ಹದಿನಾರನೇ ತಾರೀಖಿನ ದಿವಸ ಪತ್ರ ಬರೆದಿದ್ದೇವೆ. ಜ್ಯೋತಿ ಭತ್ತವನ್ನೂ ಕೂಡ ನೋಟಿಫೈ ಲಿಸ್ಟ್‌ನಲ್ಲಿ ಸೇರಿಸಬೇಕು, ಆಗ FCI ಯವರಿಗೆ ಕೊಡಲಿಕ್ಕೆ ಅನುಕೂಲವಾಗುತ್ತದೆ ಎಂದು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ.

ಶ್ರೀ ಕೆ.ಜೆ. ಕುಮಾರಸ್ವಾಮಿ : ರಾಜ್ಯ ಸರ್ಕಾರ ಖರೀದಿಸಿದರೆ ಒಳ್ಳೆಯದಾಗುತ್ತದೆ.

ಶ್ರೀ ಎಂ.ಎಸ್. ಸೋಮಲಿಂಗಪ್ಪ : ಅವರು 50 ಕೆ.ಜಿ. 50 ಕೆ.ಜಿ. ತೆಗೆದುಕೊಳುತ್ತಾರೆ, ಅಲ್ಲಿ actual 70 ಕೆ.ಜಿ. ಗೆ ಒಂದು, 30 ಕೆ.ಜಿ.ಗೆ ಒಂದು ತೆಗೆದುಕೊಳ್ಳುತ್ತಾರೆ, ಒಂದು ಚೀಲ 70 ಕೆ.ಜಿ. ಇರುತ್ತದೆ. ಆ 70 ಕೆಜಿ.ಗೂ ಅನುವು ಮಾಡಬೇಕು. ಆಗ ಒಳ್ಳೆಯದಾಗುತ್ತದೆ.

ಅಧ್ಯಕ್ಷರು : ಅಭಯಚಂದ್ರ ಜೈನ್‌ರವರು ಅವರು ಇಲ್ಲ, ಎನ್.ಎ. ಹ್ಯಾರಿಸ್ ಅವರೂ ಇಲ್ಲ. ರಾಮಲಿಂಗಾರೆಡ್ಡಿಯವರ ಪ್ರಶ್ನೆಗೆ ಸಮಯ ಕೇಳಿದ್ದಾರೆ. ಡಾ: ಬಗಲಿ ಸಾರ್ವಭೌಮ ಸಾತಗೌಡರವರು ಕೇಳಿ. ಸಚೇತಕರೆ, ಮೀನುಗಾರಿಕೆ ಸಚಿವರು ಎಲ್ಲಿದ್ದಾರೆ?

ಕು: ಶೋಭಾ ಕರಂದ್ಲಾಜೆ : ಮಾನ್ಯ ಸಚಿವರು ನನಗೆ ಕೊಟ್ಟು ಹೋಗಿದ್ದಾರೆ.

ಮೀನುಗಾರಿಕೆ ಅಭಿವೃದ್ಧಿ

131 (650) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಮೀನುಗಾರಿಕೆ ಅಭಿವೃದ್ಧಿಗಾಗಿ ಸರ್ಕಾರ ಇಂಡಿ ವಿಧಾನಸಭಾ ಕ್ಷೇತ್ರದಲ್ಲಿ ಯಾವ ಯಾವ ಕಾರ್ಯಕ್ರಮ ಹಮ್ಮಿಕೊಂಡಿದೆ?

ಶ್ರೀ ಆನಂದ ವಸಂತ ಅಸ್ನೋಟಿಕರ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ಮೀನುಗಾರಿಕೆ ಅಭಿವೃದ್ಧಿಗಾಗಿ ಬಿಜಾಪುರ ಜಿಲ್ಲೆಯ ಇಂಡಿ ವಿಧಾನಸಭಾ ಕ್ಷೇತ್ರದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

I. ತಾಲ್ಲೂಕು ಪಂಚಾಯತ್ ಯೋಜನೆಗಳು

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಗಳಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಪ್ರತಿ ಮೀನುಗಾರ ಫಲಾನುಭವಿಗೆ ರೂ.5,000–00ಗಳ ಮೀನು ಬಲೆ ಉಚಿತವಾಗಿ ವಿತರಿಸಲಾಗುವುದು.